ಹೋಗಿದ್ದ. ಮಹಡಿಯ ಮೇಲಿನ ಏಕಾಂತ ಸ್ಥಳಕ್ಕೆ ಕರೆದೊಯ್ದವರು ನೇರ ಪ್ರಸ್ತಾಪವಿಟ್ಟಿದ್ದರು. ಇದು ತಾನು ಯಾವತ್ತೂ ನಿರೀಕ್ಷಿಸಿದ್ದಲ್ಲವಾಗಿತ್ತು. ತಡವರಿಸಿದ್ದ. 'ಆದರೆ, ಯಜಮಾನರೆ... ಅವರು ಅತ್ತೆ ಮಗನ್ನ ಇಷ್ಟಪಡೋತರ ಇದೆ...' ಅವರು ಇವನ ಮುಖವನ್ನು ಗಂಭೀರ ಮೌನದಲ್ಲಿ ಒಂದು ಕ್ಷಣ ನಿರೀಕ್ಷಿಸಿದರು. 'ಶ್ಯಾಮ್, ಪುರಾಣದಲ್ಲಿ ಒಂದು ಕತೆಯಿದೆ. ಒಂದ್ಸಾರಿ ಅಷ್ಟು ಋಷಿಗಳು ಇಂದ್ರನ ಸಭೆಗೆ ಹೋಗಿ ಕೇಳತಾರೆ. ಈ ದೇಹ ನಾನಲ್ಲ ಅಂತ ಗೊತ್ತಿದ್ರು ಇದರೊಳಗೇ ಹುಟ್ಟೋ ಮನಸು ಬುದ್ಧಿಗಳನ್ನ ಪ್ರತ್ಯೇಕಿಸಿ ನೋಡೋದು ಹೇಗೆ ಅಂತ. ನನ್ ಮಗಳದ್ದೂ ಹಾಗೇನೆ. ದೇಹದ ಹೊಟ್ಟೆ ತುಂಬಿದಾಗ ಮನಸು ಬುದ್ಧಿ ವಿಹರಿಸ್ತಾ ಆಡತವೆ. ಹಸಿವಾಗಲಿ... ದೇಹ ಮನಸು ಬುದ್ಧಿ ಎಲ್ಲ ಕೆಲಸ ನಿಲ್ಸಿ ಊಟ ಊಟ ಅಂತಾ ಕಿರಿಚಾಡತವೆ. ಒಂದನ್ನ ಬಿಟ್ಟು ಒಂದಿಲ್ಲ ಅಂತ ತೋರಿಸ್ತವೆ. ಆ ಅತ್ತೆ ಮಗನ ವಿಷಯ ನಂಗಿರ್ಲಿ' ಅಂದರು.

ಒಂದು ತಿಂಗಳಲ್ಲಿ ಅದ್ದೂರಿಯಾಗಿ ಮದುವೆಯಾಗಿಬಿಟ್ಟಿತು. ತನಗೆ ಒಂದು ಪೈಸೆ ಖರ್ಚು ಮಾಡಲೂ ಬಿಡಲಿಲ್ಲ. ಪ್ರಸ್ತದ ರಾತ್ರಿ ಇವಳು ಒಳಬಂದು ಬಳಿಸಾರಿ ಕೈನೀಡಿದಾಗ ಕಂಡದ್ದು ಹಾಲುತುಂಬಿದ ಗ್ಲಾಸನ್ನು ಬಳಸಿದ ಬಿಳಿಯ ಬೆರಳುಗಳು. ಇದೇ ಪಿಸುದನಿ '... ಕುಡೀರಿ' ತನ್ನ ಭುಜದವರೆಗೆ ಬರುವ ಎತ್ತರ, ಗೋಧಿಬಣ್ಣದ ಮುಖದಲ್ಲಿ ನೆಲ ನೋಡುತ್ತಿರುವ ಕಣ್ಣುಗಳ ನೀಳರೆಪ್ಪೆಗಳು. ಆಗಲೂ ತನಗೆ ಈ ಘಟನೆಗಳೆಲ್ಲ ಸ್ವಪ್ನವಿರಬಹುದು ಅಂತಲೆ ಸಂದೇಹವಿತ್ತು. ಮಧುಚಂದ್ರಕ್ಕೆ ಡಾರ್ಜಿಲಿಂಗ್ ಅಂತ ಆಗಲೆ ವ್ಯವಸ್ಥೆಯಾಗಿತ್ತು. ಮರುದಿನವೆ ವಿಮಾನದಲ್ಲಿ ಬಾಗಡೋಗ್ರಕ್ಕೆ ಹಾರಿದ್ದರು. ಅಲ್ಲಿಂದ ರಸ್ತೆ ಮೂಲಕ ಡಾರ್ಜಿಲಿಂಗ್. ಏರಿಳಿಯುತ್ತ ಬಾಗುತ್ತ ಸಾಗುವ ಮಾರ್ಕೆಟಿನ ರಸ್ತೆಗಳಲ್ಲಿ, ಹಸಿರು ಚಿತ್ತಾರಗಳಂತಹ ಚಹಾತೋಟಗಳಲ್ಲಿ ಸುತ್ತಿ ಬಂದ ಎರಡನೆ ರಾತ್ರಿ. ಕಿಟಕಿಗೆದುರಾಗಿ ತಣ್ಣನೆ ಕಣಿವೆ. ಅದರಿಂದೇರುತ್ತ ಸಾಗುವ ಹಿಮಾಲಯದ ಶಿವಾಲಿಕ್ ಗಿರಿಶಿಖರಗಳ ಅನಂತ ಸಾಲು. ತೆಳುವಾದ ಪರದೆಯಿಂದ ಸೋಸಿ ಬರುವ ಬೆಳಕಿನಲ್ಲಿ ನಿಂತ ನೀಳಕಾಯದ ಚಂದದ ತರುಣಿಯ ಗಲ್ಲವನ್ನು ಬೆರಳಿನಿಂದೆತ್ತುತ್ತ, 'ಈ

